ಪತ್ರ ಎಂದು ಕೊಟ್ಟಿದ್ದೀರಿ. ಈ ಪತ್ರದ ಪ್ರಕಾರ ಹೋಗಿ ನಂತರ ಬಂದಿರತಕ್ಕದ್ದು ತೆಗೆದುಕೊಂಡರೆ ಅನುಕ್ರಮಣಿಕೆಗೆ ಅನುಗುಣವಾಗಿ ನಾವು ಉತ್ತರವನ್ನು ಕೊಡಲಿಕ್ಕೆ ಸಾಧ್ಯತೆಯಾಗುತ್ತದೆ. ಆದ್ದರಿಂದ ತಾವು ಈಗ ಇಲ್ಲಿರುವುದು ನೆಹರೂ ಚನ್ನಬಸಪ್ಪ ಓಲೇಕಾರ್ ಅವರ ಮೂಲಕ ಬರುತ್ತದೆ.

**ಶ್ರೀ ಆರ್. ಅಶೋಕ್** : ಮಾನ್ಯ ಅಧ್ಯಕ್ಷರೇ, ನಾನು ಕೊಟ್ಟು ಹತ್ತು ದಿವಸವಾಯಿತು. ನನ್ನದೇ ಸೀನಿಯಾರಿಟಿ ಬೇರೆಯವರದೆಲ್ಲಾ ಮುಗಿದುಹೋಯಿತು.

**ಶ್ರೀ ಎಂ.ಪಿ. ಪ್ರಕಾಶ್** : ಇದರಲ್ಲಿ ಬಂದಿದ್ದರೆ ಅದರ ಪ್ರಕಾರ ಬರುತ್ತದೆ. ತಮ್ಮದು ಮೂರನೆಯದು ವಿಷಯ ಇದೆ.

**ಶ್ರೀ ಆರ್. ಅಶೋಕ್** : ಈಗ ಅದನ್ನು ಪ್ರಸ್ತಾಪ ಮಾಡಿ ನಂತರ ನಗರಸಭೆಯ ಬಗ್ಗೆ ಮಾತನಾಡುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್** : ಆರ್. ಅಶೋಕ್ ಎಂದು ಇದೆ. ಮೂರನೆಯದು ಆದಮೇಲೆ ನಾಲ್ಕನೆಯದನ್ನು ಕೇಳುತ್ತೀರಿ. ಮೂರನೆಯದಕ್ಕೆ ಉತ್ತರವನ್ನು ಕೊಡುತ್ತೇನೆ. ನಿಮ್ಮದು ಪಟ್ಟಿಯಲ್ಲಿದೆ. ಮೊದಲನೆಯದು ಏನು ಇದೆ. ನೆಹರು ಚನ್ನಬಸಪ್ಪ ಓಲೇಕಾರ್ ಅವರದು ಇದೆ. ಅದಾದಮೇಲೆ ಬರಲಿ, ನನಗೆ ಸುಲಭವಾಗುತ್ತದೆ. ಏಕೆಂದರೆ ಪೈಲ್ ಹುಡುಕುವುದರಲ್ಲಿ ತೊಂದರೆಯಾಗುತ್ತದೆ.

**ಅಧ್ಯಕ್ಷರು** ; ಈಗ ಕ್ರಮವಾಗಿ ಎಷ್ಟು ಸಾಧ್ಯವಾಗುತ್ತದೆ. ಈಗ ಓಲೇಕಾರ್ ಅವರದನ್ನು ತೆಗೆದುಕೊಳ್ಳೋಣ.

**ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್( )** : ಮಾನ್ಯ ಅಧ್ಯಕ್ಷರೇ.....

**ಶ್ರೀ ಎಂ.ಪಿ. ಪ್ರಕಾಶ್** : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿ.ಟಿ. ರವಿ ಅವರದು ಒಂದು ಇದೆ.

**(II) ರಾಜ್ಯದ ಅನೇಕ ರೈತರು ತಮ್ಮ ಹಕ್ಕಿಗಾಗಿ ಹೋರಾಟವನ್ನು ಮಾಡಿದಂಥ ಸಂದರ್ಭದಲ್ಲಿ ದಾಖಲಾಗಿರುವ ಕೇಸುಗಳನ್ನು ವಾಪಸ್ಸು ಪಡೆಯುವ ಬಗ್ಗೆ**

†**ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್(ಬ್ಯಾಡಗಿ)** : ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದ ಅವಧಿಯಲ್ಲಿ ಈ ರಾಜ್ಯದ ಅನೇಕ ರೈತರ ಮೇಲೆ ತಮ್ಮ ಹಕ್ಕಿಗಾಗಿ ಹೋರಾಟವನ್ನು ಮಾಡುವಂಥ ಸಂದರ್ಭದಲ್ಲಿ ಪೋಲೀಸಿನವರು ಆ ಪ್ರತಿಭಟನೆಯನ್ನು ಮಾಡುವಂಥ ಜನರ ಮೇಲೆ ಮನವಿಯನ್ನು ಸಲ್ಲಿಸುವುದಕ್ಕೆ ಹೋದಾಗ ಪೋಲಿಸ್‌ನವರು ಅನೇಕ ಜನ ರೈತರುಗಳ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಬ್ಯಾಡಗಿಯಲ್ಲಿ 5–3–2004 ಕ್ಕೆ ಸುಮಾರು 25 ಜನರ ಮೇಲೆ ಮನವಿಯನ್ನು ಕೊಡಲಿಕ್ಕೆ ಹೋದ ಜನರ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಅಲ್ಲದೆ ಹಿರೆಕೆರೂರಿನಲ್ಲಿ 10–11–2003 ರಲ್ಲಿ ಸುಮಾರು 192 ಜನರ ಮೇಲೆ ಕೇಸುಗಳನ್ನು ಹಾಕಿದ್ದಾರೆ. ಮಾನ್ಯ ಕೃಷಿ ಮಂತ್ರಿಗಳು ಬಂದಾಗ ಅರ್ಜಿಯನ್ನು ಸಲ್ಲಿಸುವುದಕ್ಕೆ ಹೋದ ಸಂದರ್ಭದಲ್ಲಿ ಪೋಲೀಸರು ಅಡ್ಡಗಟ್ಟಿ ತಡೆದು ಮನವಿಯನ್ನು ಕೊಡಲಿಕ್ಕೆ ಅವಕಾಶವನ್ನು ಕೊಡಲಿಲ್ಲ. ಅವಕಾಶವನ್ನು ಕೊಡದೆ ಇದ್ದ ಸಂದರ್ಭದಲ್ಲಿ ಅಲ್ಲಿ ಆ ಜನರು ಮನವಿಯನ್ನು ತೆಗೆದುಕೊಂಡು

ಹೋದರೆ ನಾವು ರಸ್ತೆಯಲ್ಲಿ ಕೂತು ಪ್ರತಿಭಟನೆಯನ್ನು ಮಾಡುತ್ತೇವೆ ಎನ್ನುವಂಥ ಸಂದರ್ಭದಲ್ಲಿ ಪುನಃ ಐಬಿ ಗೆ ನಮ್ಮನ್ನು ಕರೆಸಿ ಮನವಿಯನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಕೃಷಿ ಸಚಿವರು ಅಂದಿನ ದಿವಸ ಹೇಳಿದಾಗ ಈ ಸದನದ ಇನ್ನೊಬ್ಬ ಸದಸ್ಯರಾದ ಸನ್ಮಾನ್ಯ ಬಿ.ಸಿ. ಪಾಟೀಲ್ ರವರು ಕೆಲವು ಹಿರಿಯ ನ್ಯಾಯಕರ ಜೊತೆಗೆ ಹೋದಾಗ ಹೊರಗಡೆ ಕುಳಿತಿರುವಂಥ ಜನರ ಮೇಲೆ ಲಾಠಿ ಛಾರ್ಜನ್ನು ಮಾಡಿ ಅವರನ್ನು ಸಿಕ್ಕಾಪಟ್ಟೆ ಥಳಿಸಿ ಅನಾಹುತವನ್ನು ಮಾಡಿದಂಥ ಘಟನೆ ತಮ್ಮೆಲ್ಲರ ಗಮನಕ್ಕೆ ಬಂದಿದೆ. ಪತ್ರಿಕೆಗಳಲ್ಲೂ ಸಹ ಟಿ.ವಿ. ಯಲ್ಲೂ ಸಹ ಆ ಪ್ರಕರಣ ಪ್ರಸಾರವಾಗಿರುತ್ತದೆ, ಇಂಥ ಸಂದರ್ಭದಲ್ಲಿ ತಮ್ಮ ಹಕ್ಕಿಗಾಗಿ ಇವತ್ತಿನ ದಿವಸ ಸರ್ಕಾರ ಜನತೆಗೆ ಸ್ಪಂದನೆಯನ್ನು ಮಾಡದೇ ಇದ್ದ ಸಂದರ್ಭದಲ್ಲಿ ಜನರಿಗೆ ಅವಕಾಶವನ್ನು ಬೇಡಿಕೆಗಳನ್ನು ಈಡೇರಿಸದೇ ಇರುವ ಸಂದರ್ಭದಲ್ಲಿ ಇವತ್ತು ಅನಿವಾರ್ಯವಾಗಿ ರೈತರುಗಳು ಬೀದಿಗೆ ಇಳಿಯುವಂಥ ಪ್ರಸಂಗಗಳು ಬರುತ್ತವೆ.

**ಅಧ್ಯಕ್ಷರು** : ಮಾನ್ಯ ಓಲೆಕಾರ್‌ರವರೇ, ಸಂಕ್ಷಿಪ್ತವಾಗಿ ಕೇಳಿ ನೀವು. ಭಾಷಣ ಮಾಡಲು ಆರಂಭ ಮಾಡಿದರೆ ಹೇಗೆ?

**ಶ್ರೀ ನೆಹರು ಚನ್ನಬಸಪ್ಪ ಓಲೆಕಾರ್** : ಮಾನ್ಯ ಅಧ್ಯಕ್ಷರೇ, ಹಿರೆಕೆರೂರಿನಲ್ಲಿ 192 ಜನರ ಮೇಲೆ ಕೇಸನ್ನು ಹಾಕಿದ್ದಾರೆ. ಬ್ಯಾಡಗಿಯಲ್ಲಿ 25 ಜನರ ಮೇಲೆ ಕೇಸನ್ನು ಹಾಕಿದ್ದಾರೆ. ರಾಣಿಬೆನ್ನೂರಿನಲ್ಲಿ ಸುಮಾರು 20 ಜನರ ಮೇಲೆ ಕೇಸನ್ನು ಹಾಕಿದ್ದಾರೆ. ಈ ಎಲ್ಲಾ ಕೇಸುಗಳನ್ನು ಸರ್ಕಾರ ಇವತ್ತು ಹಿಂದಕ್ಕೆ ಪಡೆಯಬೇಕು. ರೈತರುಗಳು ಇವತ್ತು ಸಮಸ್ಯೆಯಲ್ಲಿದ್ದಾರೆ. ಸಂಕಟದಲ್ಲಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಅವರು ಕೋರ್ಟಿಗೆ ಅಡ್ಡಾಡುತ್ತಾ ತಮ್ಮ ಹೊಲದ ಕೆಲಸವನ್ನು ಮಾಡಿಕೊಳ್ಳುವುದಕ್ಕೆ ಅಸಾಧ್ಯವಾಗುತ್ತದೆ. ಅನೇಕ ಜನರ ಮೇಲೆ ಇವತ್ತು ವಾರೆಂಟ್ ಆಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ ರೈತರ ಪರವಾಗಿ ಕೆಲಸವನ್ನು ಮಾಡುತ್ತದೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಗಮನವನ್ನು ಹರಿಸಿ ದಯವಿಟ್ಟು ಆ ಕೇಸ್‌ಗಳನ್ನು ವಾಪಸ್ ತಕ್ಷಣವೇ ಪಡೆಯಬೇಕೆಂದು ಹೇಳಿ ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** : ಮಾನ್ಯ ಅಧ್ಯಕ್ಷರೇ, ನೀರಾ ಗಲಾಟೆ ಮೇಲೆ ಕೆಇಬಿ ಗಲಾಟೆ ಮೇಲೆ ಅಥವಾ ಹೇಮಾವತಿ ನೀರು ಅಥವಾ ಕಾವೇರಿ ನೀರಿನ ಮೇಲೆ ಸ್ವಲ್ಪವೇನಾದರೂ ರೋಡ್‌ನಲ್ಲಿ ನಿಂತುಕೊಂಡು ಹೋರಾಟ ಮಾಡಿದವರಿಗೆ ಐದೈದು ಆರಾರು ಕೇಸುಗಳನ್ನು ಹಾಕಿ ಕೋರ್ಟಿನಲ್ಲಿ ನಿಲ್ಲಿಸುವುದೇನು ಇದೆ. ದಯಮಾಡಿ ಸರ್ಕಾರ ದೊಡ್ಡಮನಸ್ಸು ಮಾಡಿ ರೈತರ ಮೇಲೆ ಇರುವ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಬೇಕು. ನೀರಾ ಇಂಟ್ರಡಕ್ಷನ್ ಆದರೂ ನೀರಾ ಕೇಸನ್ನು ತೆಗೆದುಕೊಳ್ಳುವುದಿಲ್ಲ ಕೆಇಬಿ 12 ಗಂಟೆ ಕರೆಂಟ್ ಕೊಡುತ್ತೇವೆ ಎಂದು ಹೇಳಿದರು. ಅದರ ಮೇಲೆ ಗಲಾಟೆ ಮಾಡಿದವರ ಕೇಸನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ. ರೈತರ ಮೇಲೆ ಸುಮ್ಮಸುಮ್ಮನೆ ಈ ರೀತಿ

ಮೊಕದ್ದಮೆಗಳನ್ನು ಹಾಕುತ್ತಿದ್ದೀರಿ. ಸಾರ್ವಜನಿಕರಾಗಿ ಅವರು ಹೋರಾಟ ಮಾಡಿದವು. ಕ್ರಿಮಿನಲ್ ಕೇಸ್‌ಗಳು ಅಲ್ಲದವು, ದಯವಿಟ್ಟು ವಾಪಸ್ ತೆಗೆದುಕೊಳ್ಳುವುದಕ್ಕೆ ಏನದರೂ ತಾವು ದೊಡ್ಡ ಮನಸ್ಸನ್ನು ಮಾಡಬೇಕು.

**ಶ್ರೀ ಬಿ.ಸಿ. ಪಾಟೀಲ್ (ಹಿರೆಕೆರೂರ್)** : ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಒಬ್ಬ ಆರೋಪಿ ಇದ್ದೇನೆ. ನ್ಯಾಯಾಲಯಕ್ಕೆ ಪ್ರತಿ ತಿಂಗಳೂ ಹಾಜರಾಗುತ್ತಿದ್ದೇನೆ. 193 ಜನ ರೈತರುಗಳನ್ನು ಸರ್ಕಾರದವರು ಹಿಂಡಲಗಾ ಜೈಲಿಗೆ ಕಳುಹಿಸಿದ್ದರು. ತದನಂತರ ಛಾರ್ಜ್‌ಸೀಟನ್ನು ಹಾಕಬೇಕಾದರೆ ಯಾರ್ಯಾರು ನಮ್ಮ ಜೊತೆಗೆ ಗುರುತಿಸಿಕೊಂಡಿದ್ದರೋ ಅವರನ್ನೆಲ್ಲಾ ಸೇರಿಸಿ ಕೊನೆಗೆ ಛಾರ್ಜ್‌ಸೀಟನ್ನು ಹಾಕಬೇಕಾದರೆ 212 ಜನರ ಮೇಲೆ ಛಾರ್ಜ್‌ಸೀಟನ್ನು ಹಾಕಿದ್ದಾರೆ. ಇವತ್ತು ರೈತರ ಬೆಳೆ ವಿಮೆ ಬಗ್ಗೆ ಮತ್ತು ಸಕ್ಕರೆ ಕಾರ್ಖಾನೆಯ ಬಗ್ಗೆ ನ್ಯಾಯಯುತವಾಗಿ ಹೋರಾಟ ಮಾಡಿದಂಥ ರೈತರು ಇವತ್ತು ಬರಗಾಲ ಪರಿಸ್ಥಿತಿಯಲ್ಲಿ ಕೂಡ ನ್ಯಾಯಾಲಯಕ್ಕೆ ಅಲೆಯುವಂಥ ಪರಿಸ್ಥಿತಿ ಬಂದಿದೆ. ಅದೇ ದಿವಸ ನಾನೂ ಕೂಡ ಹಿರೆಕೆರೂರ್ ಪೋಲೀಸ್ ಠಾಣೆ ಗುನ್ನೆ ನಂ. 101:2003 ರಲ್ಲಿ ಒಂದು ಕೇಸನ್ನು ಕೊಟ್ಟಿದ್ದೆ. ಮಾಜಿ ಶಾಸಕರಾದ ಶ್ರೀ ಬನ್ನಿಕೋಡ್ ಮತ್ತು ಇತರ 15 ಜನರ ಮೇಲೆ. ಇವತ್ತು ಆ ಪ್ರಕರಣದಲ್ಲಿ ಪೋಲೀಸರು ನನಗೆ ಯಾವುದೇ ರೀತಿ 159 ಸಿಆರ್‌ಪಿಸಿ ಅಡಿ ನೋಟೀಸನ್ನು ಕೊಡಬೇಕಾಗಿತ್ತು "ಬಿ. ರಿಪೋರ್ಟನ್ನು ಕೊಟ್ಟಿದ್ದಾರೆ" ಬಿ ರಿಪೋರ್ಟನ್ನು ಕೊಟಿದ್ದು ನನ್ನ ಗಮನಕ್ಕೆ ಬಂದಿಲ್ಲ. ನನಗೆ ಇವತ್ತಿಗೂ ಕೂಡ ಆ ನೋಟೀಸನ್ನು ಜಾರಿ ಮಾಡದೆ ಅಲ್ಲಿಯ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯಾದಂಥ ಶ್ರೀಕಂಠಪ್ಪನವರ ನೇರ ನೇತೃತ್ವದಲ್ಲಿ ಕಾನೂನನ್ನು ಉಲ್ಲಂಘಿಸಿ ನಮ್ಮ ಕೇಸ್‌ನಲ್ಲಿ "ಬಿ. ರಿಪೋರ್ಟನ್ನು ಹಾಕಿದ್ದಾರೆ. ಇದು ಬಹಳ ಮುಖ್ಯವಾದಂಥ ವಿಚಾರ. ಇವತ್ತು 212 ಜನ ರೈತರು ಪ್ರತಿ ತಿಂಗಳೂ ಕೋರ್ಟಿಗೆ ಹೋಗಬೇಕೆಂದು ಹೇಳಿದರೆ ಮನೆಯಲ್ಲಿರುವ ಹೆಣ್ಣುಮಕ್ಕಳ ಬಂಗಾರವನ್ನು ಒತ್ತೆ ಇಟ್ಟು ಕೋರ್ಟಿಗೆ ಹೋಗುವ ಸಂದರ್ಭ ಇದೆ. ಆದ್ದರಿಂದ ನಮ್ಮ ಕೇಸ್‌ನಲ್ಲಿ ಆದಂಥ ಅನ್ಯಾಯವನ್ನು ಸರಿಪಡಿಸಬೇಕು. ನನ್ನ ಕೇಸ್‌ನಲ್ಲಿ ನನಗೆ 159 ಫಾರಂನ್ನು ಸರ್ವ್ ಮಾಡದೆ "ಬಿ." ರಿಪೋರ್ಟ್‌ನ್ನು ಕೊಟ್ಟಂಥ ಪೋಲೀಸ್ ಅಧಿಕಾರಿ ಅಮಾನತ್ತಾಗಬೇಕು. ರೈತರ ಮೇಲೆ ಇರುವ ಕೇಸುಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ)** : ಮಾನ್ಯ ಅಧ್ಯಕ್ಷರೇ, ಹೋರಾಟಗಳನ್ನು ಮಾಡುವ ಸಂದರ್ಭದಲ್ಲಿ ರೈತರಿಗಾಗಲಿ ಸಾಮಾನ್ಯ ಜನರು ಅವರ ಹಕ್ಕುಗಳಿಗೋಸ್ಕರ ಹೋರಾಟ ಮಾಡುವ ಸಂದರ್ಭಗಳಲ್ಲಿ ಯಾವ ಯಾವ ಕೇಸ್‌ಗಳನ್ನು ಹಾಕಿದ್ದಾರೋ ರಾಜ್ಯದ ಎಲ್ಲಾ ಕಡೆ, ಅವರು ಕಾರ್ಮಿಕರಿರಬಹುದು, ರೈತರಿರಬಹುದು. ಅವರ ಮೇಲೆ ಹಾಕಿರತಕ್ಕ ಎಲ್ಲಾ ಕೇಸುಗಳನ್ನು ದಯವಿಟ್ಟು ಸರ್ಕಾರ ವಾಪಸ್ಸು ಪಡೆಯಬೇಕು. ಈಗ ರೈತರು ಹಾಲು ದರ ಕಡಿಮೆ ಮಾಡಿದ್ದಾರೆ ಎಂದು ಹೇಳಿ ಹೋರಾಟ ಮಾಡಿದರು. ಕೇಸು ಹಾಕಿದರು. ಆ ಕೇಸ್‌ನಲ್ಲಿ

ನಾನೂ ಕೂಡ ಈಗ ಕೋರ್ಟಿಗೆ ಹೋಗುತ್ತಿದ್ದೇನೆ. 1997ರಲ್ಲಿ ಹಾಲಿನ ದರ ಕಡಿಮೆ ಮಾಡಿದ್ದಾರೆ ಎಂದು ಹೋರಾಟ ಮಾಡಿದಾಗ ಒಂದು ಕೇಸು ಹಾಕಿದರು. ಸುಮ್ಮನೆ 5-6 ವರ್ಷದಿಂದ ತಿರುಗಿಸುತ್ತಿದ್ದಾರೆ. ಕೇಸು ಕ್ಲೋಸ್ ಆಗಿಲ್ಲ. ಅದರಲ್ಲಿ ಯಾವ್ಯಾವ ಊರಿನವರೋ ಹೋರಾಟಕ್ಕೆ ಬಂದಾಗ ಸೇರಿರುತ್ತಾರೆ. ಹೋರಾಟಕ್ಕೆ ಬಂದಾಗ ಇಡೀ ಜಿಲ್ಲೆಯವರೆಲ್ಲರೂ ಸೇರಿರುತ್ತಾರೆ. ಕೇಸ್ ಒಂದೇ ಸಲ ಬರುವುದಿಲ್ಲ. ಛಾರ್ಜ್ ಆಗುವುದಿಲ್ಲ. ಛಾರ್ಜ್ ಆಗದೇ ಹತ್ತಾರು ವರ್ಷ ತಿರುಗಾಡುತ್ತಿರತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಹೋರಾಟ ಮಾಡಿದ್ದಾರೆ. ಅವರ ಮೇಲೂ ಕೇಸು ಹಾಕಿದ್ದಾರೆ. ಸಾರ್ವಜನಿಕ ಸಮಸ್ಯೆಗಳಿಗೋಸ್ಕರ ಹೋರಾಟ ಮಾಡಿದವರ ಮೇಲೆ ಕೇಸುಗಳನ್ನು ಹಾಕಿದ್ದರೆ ಅದನ್ನು ವಾಪಸ್ ಪಡೆಯಬೇಕು. ಕ್ರಿಮಿನಲ್ ನೇಚರ್ ಅಲ್ಲದಿದ್ದರೆ ವಾಪಸ್ ಪಡೆಯಬೇಕು. ದಯವಿಟ್ಟು ವಾಪಸ್ ಪಡೆಯಬೇಕೆಂದು ಹೇಳಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ)** ; ಮಾನ್ಯ ಅಧ್ಯಕ್ಷರೇ, ಬಹುಶಃ ವರ್ಷಾನುಗಟ್ಟಲೆ ಸಾವಿರಾರು ಜನ ರೈತರ ಮೇಲೆ ಕೇಸು ಇರತಕ್ಕದ್ದು ಪ್ರತಿ ಜಿಲ್ಲೆವಾರು ಮತ್ತು ತಾಲ್ಲೂಕುವಾರು ಇರತಕ್ಕಂಥ ಅಂಕಿ ಅಂಶಗಳನ್ನು ಮಾನ್ಯ ಮುಖ್ಯಮಂತ್ರಿಗಳು. ಅವರೇ ಗೃಹ ಸಚಿವರಾಗಿದ್ದಾರೆ. ಇವೆಲ್ಲಾ ಅಂಕಿ ಅಂಶಗಳನ್ನು ಮೊದಲು ತರಿಸಿಕೊಳ್ಳಬೇಕಾದ್ದು ಕರ್ತವ್ಯ. ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಈಗ ನನ್ನ ಮೇಲೆ ಸುಮಾರು 20 ಕೇಸುಗಳು ಇವೆ. ರೈಲ್ವೆ ತಡೆದಿರತಕ್ಕದ್ದು ಕೇಸ್ ಇದೆ. ಕೇಂದ್ರದಿಂದ ನಮಗೆ ರೈಲ್ವೆ ವಿಚಾರದಲ್ಲಿ ಅನ್ಯಾಯ ಆಗಿದೆ. ಪ್ರತಿ ಸಾರಿ ನಮಗೆ ರೈಲ್ವೆ ವಿಚಾರದಲ್ಲಿ ಅನ್ಯಾಯವಾಗಿದೆ ಎಂದು ಹೇಳಿ ಪ್ರತಿ ಸಾರಿ ರೈಲನ್ನು ತಡೆದಾಗಲೂ ನಮ್ಮ ಮೇಲೆ ಕೇಸು. ನಮ್ಮ ಜೊತೆಗೆ ಹೋಗಿರತಕ್ಕವರ ಮೇಲೆ ಕೇಸು. ಪ್ರತಿ ಸಾರಿ ನೋಟೀಸು. ನೋಟೀಸು, ವಾರೆಂಟ್, ಹೋಗುವುದು, ಅವರನ್ನು ನಾವು ಕರೆದುಕೊಂಡು ಹೋಗುವುದು ಇದೇ ಆಗಿ ವರ್ಷಗಟ್ಟಲೇ ಮೊಕದ್ದಮೆಗಳನ್ನು ನಡೆಯುತ್ತಿವೆ. ಇಂತಹದನ್ನು ನೋಡಬೇಕು. ಇಂತಹ ಮೊಕದ್ದಮೆಗಳನ್ನು ಯಾವ್ಯಾವುದು ಇದೆ, ಇದೆಲ್ಲಾವನ್ನೂ ಪರಿಶೀಲನೆ ಮಾಡಿ. ಇದಕ್ಕಾಗಿ ತಾವು ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ. ಎಲ್ಲೆಲ್ಲಿ ಕಾರ್ಮಿಕರದ್ದು ಇದೆ? ರೈತರದ್ದು ಇದೆ? ಮತ್ತು ಹೋರಾಟಗಾರರದ್ದು ಇದೆ? ಚಳುವಳಿಗಾರರದ್ದು ಇದೆ? ಇದೆಲ್ಲಾ ವಿವರವನ್ನೂ ತರಿಸಿ ಕೂಡಲೇ ತಾವು ಇವು ಯಾವ ಹಂತದಲ್ಲಿದೆ? ಈ ಕೇಸುಗಳಲ್ಲಿ ಗುರುತರವಾಗಿ. ತೀವ್ರವಾಗಿರತಕ್ಕದ್ದರ ಬಗ್ಗೆ ನೀವು ಏನು ಬೇಕಾದರೂ ಮಾಡಿ. ಆದರೆ ಸಾಮಾನ್ಯ ಕೇಸು ಇರುತ್ತದೆ. ಅಲ್ಲಿ ಬರುತ್ತೇವೆ. ನಾವು ಇನ್ನೂ ಘೋಷಣೆ ಕೂಗಿರುವುದಿಲ್ಲ. ತಕ್ಷಣವೇ ಎಲ್ಲರನ್ನೂ ವ್ಯಾನಿಗೆ ಹಾಕುತ್ತಾರೆ. ಅವರ ಮೇಲೆ ಒಂದು ಕೇಸು ಹಾಕಿರುತ್ತಾರೆ ಮತ್ತು ಕೋರ್ಟಿಗೆ ತೆಗೆದುಕೊಂಡು ಹೋಗುತ್ತಾರೆ. ಇದು ಬಹಳ ಅನ್ಯಾಯ ನಡೆದಿದೆ. ಅದರಲ್ಲೂ ರೈತರ ಮೇಲೆ ಆಗಿರತಕ್ಕದ್ದು ಸುಮಾರು 3 ಸಾವಿರ ಮೂರುವರೆ

ಸಾವಿರ ರೈತರ ಮೇಲೆ ಇನ್ನೂ ಕೇಸುಸ್‌ಗಳು ನಡೆಯುತ್ತಿದೆ. ತಾವು ದಯಮಾಡಿ ಆ ವಿವರ ತರಿಸಿ, ಕೂಡಲೇ ಹಿಂತೆಗೆದುಕೊಳ್ಳುವಂತಹ ಕ್ರಮ ಮಾಡಬೇಕೆಂದು ತಮ್ಮ ಮೂಲಕ ಕಳಕಳಿಯ ಮನವಿ ಮಾಡುತ್ತಿದ್ದೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಕಳೆದ ಅನೇಕ ವರ್ಷಗಳಿಂದ ಅವರ ನ್ಯಾಯಯುತವಾದಂತಹ ಬೇಡಿಕೆಗಳು ಈಡೇರಬೇಕು ಎಂದು ಹೇಳಿ ಬೀದಿಗೆ ಇಳಿದು ಹೋರಾಟ ಮಾಡಿದಂತಹ ಅನೇಕ ಘಟನೆಗಳು ನಡೆದಿದೆ. ಇದು ಸರ್ವೇ ಸಾಮಾನ್ಯವಾಗಿ ತಮಗೆ ನ್ಯಾಯ ಸಿಗಬೇಕೆಂದು ಹೇಳಿ ಬೀದಿಗೆ ಇಳಿದು ಹೋರಾಟ ಮಾಡುವಂತದ್ದು ಸರ್ಕಾರದ ಗಮನಕ್ಕೆ ತರುವಂಥದ್ದು ಸ್ವಾಭಾವಿಕವಾದಂತಹ ಸಂಗತಿ. ಈ ಬಗ್ಗೆ ನಾವು ಆಗಲೇ ಒಂದು ನಿಯೋಗ ಬಂದು ವಿನಂತಿ ಮಾಡಿದ್ದೇವೆ. ಯಾವ್ಯಾವ ಕೇಸು ಆ ತರಹ ದಯಮಾಡಿ 100ಕ್ಕೆ 90 ಕೇಸುಗಳಲ್ಲಿ ನ್ಯಾಯಯುತವಾದಂತಹ ಬೇಡಿಕೆಯನ್ನು ಇಟ್ಟುಕೊಂಡು ಹೋರಾಟ ಮಾಡಿರತಕ್ಕದ್ದು. ಒಂದು ಬಾರಿ ಯಾವುದೋ ಸಂದರ್ಭದಲ್ಲಿ ನಾವು ಮಾನ್ಯ ಮುಖ್ಯಮಂತ್ರಿಗಳ ಮನೆಯು ಮುಂದೆ ಹೋರಾಟ ಮಾಡಿದಾಗ ಇವರು ಕೊಲೆ ಮಾಡುವುದಕ್ಕೆ ಬಂದಿದ್ದರು ಎಂದು ಹೇಳಿ ನನ್ನನ್ನು ಹಾಗೂ ಶ್ರೀಮತಿ ಪ್ರಮೀಳಾ ನೇಸರ್ಗಿ ಅಂತಹವರನ್ನು ಸೇರಿಸಿ ಕೇಸು ಹಾಕಿ ಇವತ್ತೂ ನಾವು ಓಡಾಟ ಮಾಡುತ್ತಿದ್ದೇವೆ, ಅದರಿಂದ ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಆ ಕಾನೂನಿನ ಚೌಕಟ್ಟಿನಲ್ಲಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗದ ರೀತಿಯಲ್ಲಿ ಪ್ರತಿಭಟನೆ ಮಾಡುವಂತಹದು ಅದು ಅವರ ಸಾರ್ವಭೌಮ ಹಕ್ಕು. ಅದನ್ನು ಯಾರೂ ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಅದರಿಂದ ದಯಮಾಡಿ, ಆ ರೀತಿಯ ಕೇಸ್‌ಗಳು ಯಾವುದು ಇದೆ? ಅದು ಕಾರ್ಮಿಕರ ಬಗ್ಗೆ ಇರಬಹುದು, ವಿಶೇಷವಾಗಿ ನಮ್ಮ ರೈತರ ಬಗ್ಗೆ ಇರಬಹುದು. ಎಲ್ಲಾ ತಾವು ಪರಿಶೀಲನೆ ಮಾಡಿ, ಚರ್ಚೆ ಮಾಡಿ ಆ ಎಲ್ಲಾ ಕೇಸುಗಳನ್ನು ವಾಪಸ್ ತೆಗೆದುಕೊಂಡು ಅವರು ನೆಮ್ಮದಿಯಿಂದ ಇರುವುದಕ್ಕೆ ಅವಕಾಶಮಾಡಿ. ಅವರ ಸಮಸ್ಯೆಗಂತೂ ನಾವು ಪರಿಹಾರ ಹುಡುಕಲಿಲ್ಲ. ಅವರ ಕಣ್ಣೀರನ್ನು ಒರೆಸುವುದಕ್ಕೆ ನಮಗೆ ಆಗಲಿಲ್ಲಿ. ವಿನಾ ಕಾರಣ ಅವರು ಕೋರ್ಟಿಗೆ ಅಲೆಯುವುದು ತಪ್ಪಿಲ್ಲ. ದಯಮಾಡಿ ಆ ಎಲ್ಲಾ ಕೇಸಗಳನ್ನು ವಾಪಸ್ ಪಡೆಯಬೇಕೆಂದು ರೈತರು ಮತ್ತು ಕಾರ್ಮಿಕರ ಪರವಾಗಿ ತಮಗೆ ವಿನಂತಿ ಮಾಡುತ್ತೇನೆ. ತಾವು ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಸಿ.ಎಂ. ಉದಾಸಿ(ಹಾವೇರಿ)** : ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯಲ್ಲಿ ಒಂದರಲ್ಲೇ ಅಲ್ಲ, ಇಡೀ ರಾಜ್ಯಾದ್ಯಂತ ಅಕ್ರಮ ಸಾಗುವಳಿ ಮಾಡಿದಂತಹ ರೈತರ ಮೇಲೆ ಕೆಲವು ಮೊಕದ್ದಮೆಗಳನ್ನು ಹೂಡಿದ್ದಾರೆ. ಅಕ್ರಮ ಸಾಗುವಳಿ ಮಾಡಿದಂತಹ ಮೊಕದ್ದಮೆ ಮತ್ತೆ ಹೂಡಿದ್ದರೂ ಸಹಿತ ಅನೇಕ ಮೊಕದ್ದಮೆಗಳನ್ನು ವಾಪಸ್ ಪಡೆಯುವುದರಲ್ಲಿ ಹಿಂದಿನ ಸರ್ಕಾರ ಕಾರ್ಯಗತವಾಗಿದೆ. ಆದರೆ ಅಲ್ಲಿ ಕೆಲವು ಪ್ರಕರಣಗಳನ್ನು ಇನ್ನೂವರೆಗೂ ಹಾಗೆಯೇ ಇಟ್ಟಿದ್ದಾರೆ. ಅದರಲ್ಲಿ

ನನ್ನ ಹಾನಗಲ್ ತಾಲ್ಲೂಕಿನಲ್ಲಿ ಒಂದು ಇದೆ. ಇನ್ನು ಆರು ಪರಕರಣಗಳನ್ನು ಹಾಗೆಯೇ ಕೈ ಬಿಟ್ಟು ಬಿಟ್ಟಿದ್ದಾರೆ. ಅನೇಕ ಪ್ರಕರಣಗಳನ್ನು ಈಗಾಗಲೇ ಹಿಂದಕ್ಕೆ ತೆಗೆದುಕೊಂಡಿರುವಂತಹ ಉದಾಹರಣೆಗಳು ಇದ್ದಾವೆ. ಇದರ ಜೊತೆಗೆ ಬೆಳೆ ವಿಮೆಗಾಗಿ ಹೋರಾಟ ಮಾಡಿದಂತಹ ಸಂದರ್ಭದಲ್ಲಿ ಇಡೀ ರಾಜ್ಯದಾದ್ಯಂತ ಮೊಕದ್ದಮೆಗಳನ್ನು ಹೂಡಿದ್ದಾರೆ. ಅದರಲ್ಲಿ ಹಾವೇರಿ ಜಿಲ್ಲೆಯಲ್ಲಿ ಮೂರು ಮೊಕದ್ದಮೆಗಳನ್ನು ಹೂಡಿರುವಂತಹದು ಇದೆ. ಉದಾಹರಣೆಗೆ ರಾಣೆಬೆನ್ನೂರು, ಹಿರೇಕೆರೂರು, ಮತ್ತು ಬ್ಯಾಡಗಿಯವರು. ಅದರಲ್ಲಿ ಈ ಸದನದ ಸದಸ್ಯರಾದವರೇ ಸಹಿತ ಅಲ್ಲಿ ಅರೋಪಿಗಳಾಗಿರುವಂಥಹ ಪ್ರಸಂಗ. 192 ಜನ ರೈತರು ಎಂಟು ದಿವಸಗಳು ಜೈಲಿನಲ್ಲಿ ಇರುವಂತಹ ಒಂದು ಪ್ರಸಂಗ ಬಂದಿದೆ. ಆ ಕಾರಣದಿಂದ ಇಂತಹ ಜನಪರ ಹೋರಾಟಕ್ಕೆ ಸಂಬಂಧ ಇರುವಂತಹ ಪ್ರಕರಣಗಳು. ವಿದ್ಯುಚ್ಛಕ್ತಿಯ ಬಳಕೆಗಾಗಿ ಆಗಿರುವಂತಹ ಅನ್ಯಾಯದ ವಿರುದ್ಧ ಹೋರಾಟ ಮಾಡಿದ್ದಾರೆ. ಮೀಟರುಗಳನ್ನು ಕೊಡಿಸಬೇಕಾದಂತಹ ಸಂದರ್ಭದಲ್ಲಿ ಹೋರಾಟ ಮಾಡಿದ್ದಾರೆ. ನಿಯಮಿತವಾಗಿ ವಿದ್ಯುತ್ ಸರಿಯಾದ ರೀತಿಯಲ್ಲಿ ಸಿಗದೇ ಇರುವಂತಹ ಸಂದರ್ಭದಲ್ಲಿ ಹೋರಾಟ ಮಾಡಿದ್ದಾರೆ ಇಂತಹ ಜನಪರ ಹೋರಾಟ ಮಾಡಿದಂತಹ ಹೋರಾಟಗಳು ಏನು ಇದ್ದಾವೆ ರೈತರ ಮೇಲೆ ಹೂಡಿರುವಂತಹ ಮೊಕದ್ದಮೆಗಳಿಗೆ ಆದ್ಯತೆಯನ್ನು ಕೊಟ್ಟು ಈ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು ಎಂದು ನಾನು ಇಲ್ಲಿ ಕೇಳಲು ಇಚ್ಛಿಪಡುತ್ತೇನೆ.

**ಶ್ರೀ ಗೋವಿಂದ ಎಂ ಕಾರಜೋಳ** : ಸನ್ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಇಲ್ಲೊಂದು ವಿಶೇಷ ಪ್ರಕರಣ ಇದೆ.

**ಅಧ್ಯಕ್ಷರು** : ಈಗ ಪ್ರಮುಖವಾಗಿ ಎಲ್ಲರೂ ಹೇಳಿದ್ದಾರೆ. ನೀವು ನಿಮ್ಮ ಭಾಗದಲ್ಲಿ ಇರತಕ್ಕದ್ದನ್ನು ಹೇಳುವುದು ಅಗತ್ಯ ಇಲ್ಲ. ಎಲ್ಲಾ ಸಮಗ್ರವಾಗಿ ಹೇಳಿರುವುದರಿಂದ ಮತ್ತೆ ಮತ್ತೆ ಅದನ್ನು ಹೇಳುವುದು ಬೇಡ.

**ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ)** : ಇಂಟರ್‌ಸ್ಟೇಟ್ ಪ್ರಾಬ್ಲಮ್ ಇದೆ. ಇದೇ ವಿಷಯದಲ್ಲಿ ಅಂತರ್‌ರಾಜ್ಯ ಪ್ರಾಬ್ಲಮ್ ಇದೆ. ಮಾನ್ಯ ಕಂದಾಯ ಸಚಿವರಿಗೂ ಗೊತ್ತಿದೆ. 2002ರಲ್ಲಿ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ರೈತರು ಭೀಮಾ ನದಿಗೆ ನೀರು ಬಿಡಬೇಕೆಂದು ಹೇಳಿ ಹೋರಾಟ ಮಾಡಿದಂಥ ಸಂದರ್ಭದಲ್ಲಿ ಮಹಾರಾಷ್ಟ್ರ ಸರ್ಕಾರದ ಅಧಿಕಾರಿಗಳು ನಮ್ಮ ಇಂಡಿ ತಾಲ್ಲೂಕಿನ ಸುಮಾರು 78 ರೈತರ ಮೇಲೆ ಮೊಕದ್ದಮೆಗಳನ್ನು ಹೂಡಿದ್ದಾರೆ. ಅವರ ವಾಹನಗಳನ್ನು ಜಪ್ತಿ ಮಾಡಿ ತೆಗೆದುಕೊಂಡು ಹೋಗಿದ್ದಾರೆ. ಮೋಟರುಗಳನ್ನು ಜಪ್ತಿ ಮಾಡಿ ತೆಗೆದುಕೊಂಡು ಹೋಗಿದ್ದಾರೆ. ಮತ್ತೆ ರೈತರಿಗೆ ಸುಮಾರು ಎರಡು ವರ್ಷದಿಂದ ಸೋಲಾಪುರ ಕೋರ್ಟಿಗೆ ಅಲೆದಾಡುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಏನು ವಿನಂತಿ ಮಾಡುತ್ತೇನೆಂದರೆ ನಮ್ಮ ರಾಜ್ಯದಲ್ಲಿರತಕ್ಕ ಕೇಸುಗಳನ್ನು ವಾಪಸ್ ಪಡೆಯುವುದರ ಜೊತೆಯಲ್ಲಿ ಮಹಾರಾಷ್ಟ್ರ ಸರ್ಕಾರಕ್ಕೆ

ವಿನಂತಿ ಮಾಡಿ, ಆ ಮೊಕದ್ದಮೆಗಳನ್ನು ವಾಪಸ್ ಪಡೆಯಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಕಂದಾಯ ಸಚಿವರನ್ನು, ಮಾನ್ಯ ಮುಖ್ಯಮಂತ್ರಿಗಳನ್ನು ಎಲ್ಲರನ್ನೂ ನಾನು ಇವತ್ತು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು:** ಮಾನ್ಯ ಅಧ್ಯಕ್ಷರೆ, ಬಹಳ ಜನ ಈ ವಿಚಾರದಲ್ಲಿ ಹೇಳಿದ್ದಾರೆ.

**ಶ್ರೀ ಆರ್. ಧ್ರುವ ನಾರಾಯಣ (ಸಂತೇಮರಳ್ಳಿ)** : ಮಾನ್ಯ ಅಧ್ಯಕ್ಷರೆ. ಈ ಕಾವೇರಿ ಚಳುವಳಿ ಸಂದರ್ಭದಲ್ಲಿ ರೈತರ ಮೇಲೆ ಮತ್ತು ವೈಯಕ್ತಿಕವಾಗಿ ನನ್ನ ಮೇಲೆ ಕೂಡ ಹಲವಾರು ಮೊಕದ್ದಮೆಗಳನ್ನು ಹಾಕಿ ನಮಗೆ ಇವತ್ತು ವಾರಂಟ್ ಬರುವಂತಹ ಪರಿಸ್ಥಿತಿ ಆಗಿದೆ. ದಯಮಾಡಿ ಕೂಡಲೇ ಹಾಕಿರತಕ್ಕ ಎಲ್ಲಾ ಕೇಸಗಳನ್ನು, ರೈತರ ಮೇಲೆ ಮತ್ತು ಸಾರ್ವಜನಿಕರ ಬದುಕಿನಲ್ಲಿ ಹೋರಾಟ ಮಾಡಿಕೊಂಡು ಬರುತ್ತಿರತಕ್ಕ ಎಲ್ಲಾ ಮುಖಂಡರ ಮೇಲೆ ಹಾಕಿರತಕ್ಕಂಥ ಮೊಕದ್ದಮೆಗಳನ್ನು ಕೂಡಲೇ ವಾಪಸ್ ಪಡೆಯಬೇಕು ಎಂದು ಹೇಳಿ ಸರ್ಕಾರವನ್ನು ತಮ್ಮ ಮುಖಾಂತರ ಆಗ್ರಹ ಪಡಿಸುತ್ತೇನೆ.

**†ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಹಳ ಜನ ಶಾಸಕರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಯಾವುದೇ ಒಂದು ಹೋರಾಟಕ್ಕೆ ಎರಡು ಮುಖಗಳೂ ಇರುತ್ತವೆ. ಒಂದು ಆ ಹೋರಾಟದ ಸಫಲೆಯನ್ನು ನಿರೀಕ್ಷೆ ಮಾಡುತ್ತಾರೆ. ಮತ್ತು ಹೋರಾಟದಿಂದ ಆಗತಕ್ಕಂಥ ಕೆಲವು ತೊಂದರೆಗಳನ್ನು ಅನಿವಾರ್ಯವಾಗಿ ಅನುಭವಿಸಬೇಕಾದಂತಹದೂ ಇದೆ. ಅದರಿಂದ ಪೊಲಾಟ್ ರಿಸಲ್ಟ್ ಎಂದು ಏನು ಕರೆಯುತ್ತೇವೆ, ಇವತ್ತು ಮಾನ್ಯ ಬಿ,ಸಿ, ಪಾಟೀಲ್ ಅವರಾಗಲೀ, ಒಲೇಕಾರ್ ಆಗಲೀ, ಸುರಾಜ್ ಸಜ್ಜನ್ ಆಗಲಿ ಇವರೆಲ್ಲರೂ ವಿಮೆ ವಿಚಾರದಲ್ಲಿ, ಬರಗಾಲ ಕಾಮಗಾರಿ ವಿಚಾರವಲ್ಲಿ ಹೋರಾಟ ಮಾಡಿದ ಪ್ರತಿಫಲವೇ ಇವತ್ತು ಅವರು ಈ ಸದನಕ್ಕೆ ಬರಲಿ ಸಾಧ್ಯವಾಯಿತು. ಅದರಿಂದ ಆ ಹೋರಾಟದ ಮೂಲಕವಾಗಿ ಬಹಳ ಅನುಕೂಲಗಳೂ ಕೂಡ ಆಗುತ್ತವೆ. ಜನಪ್ರಿಯ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದಕ್ಕೆ ಆಗುತ್ತದೆ. ಮತ್ತೆ ಅದರಿಂದ ಆಗತಕ್ಕ ಸಣ್ಣ ಪುಟ್ಟ ಕಿರಿಕಿರಿಗಳು ಇರುತ್ತದೆ. ಈ ರೀತಿ ಪೊಲೀಸ್ ಇಲಾಖೆಯವರು ಹಾಕತಕ್ಕ ಕೇಸ್‌ಗಳು. ಇದರಲ್ಲಿ ವರ್ಗೀಕರಣ ಮಾಡಬೇಕು ಎಂದು ತಾವೇನು ಹೇಳುತ್ತೀರಿ. ಈಗೆಲ್ಲಾ ನಿಮ್ಮ ಮಾತುಗಳನ್ನು ಕೇಳಿದ್ದೇವೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ತಿಳಿದಿದ್ದಾರೆ. ಸಂಪೂರ್ಣವಾದ ಸಹಮತಿ ಇದೆ. ರಾಜಕೀಯ ಕಾರಣಕ್ಕಾಗಿ, ಸದುದ್ದೇಶಕ್ಕಾಗಿ ಒಂದು ಒಳ್ಳೆಯ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕಾದಂತಹ ಸಂದರ್ಭದಲ್ಲಿ ಆಗಿರತಕ್ಕ ಸಣ್ಣ ಪುಟ್ಟ ಅಹಿತಕಾರಿ ಘಟನೆಗಳೂ ಕೂಡ ಆಗಿರಬಹುದು. ಆದರೆ ಅವುಗಳನ್ನು ರಾಜಕೀಯವಾದಂತಹ ಒಂದು ನಿರ್ಧಾರ ತೆಗೆದುಕೊಂಡು ಇವರ ಮೂಲಕ ಒಮ್ಮೆ ಒಂದು ಆಜ್ಞೆಯನ್ನು ಮಾಡಬೇಕೆಂದು ಬಹಳ ಜನ ಹಿರಿಯರು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡಿದ್ದಾರೆ.

ಖಂಡಿತವಾಗಿಯೂ ನಾವು ಇದನ್ನು ಕ್ಯಾಬಿನೆಟ್‌ನಲ್ಲಿ ಇಟ್ಟು ಮಾಡಬೇಕಾಗುತ್ತದೆ. ಅದನ್ನು ಇಟ್ಟುಮಾಡುತ್ತೇವೆ. ಅದರ ಜೊತೆಗೆ ತಾವು ಈ ವಿಚಾರವನ್ನು ಉತ್ತರ ಕೊಡಿ ಎಂದು ಕೇಳಿದ್ದೀರಿ. ಮತ್ತೆ ಇಷ್ಟೆಲ್ಲಾ ಚರ್ಚೆ ಆಗಿ ಉತ್ತರ ಬೇಕು ಎನ್ನುವುದಾದರೆ ಕೊಡುತ್ತೇವೆ. ಇಲ್ಲದೇ ಇದ್ದರೆ so it is as read. ಎಂದು ಹೇಳಿ ತಾವು ತೆಗೆದುಕೊಳ್ಳುವುದಾದರೆ ಸಮಯವಾದರೂ ಉಳಿಯುತ್ತದೆ. so it may be taken an read. ದಿನಾಂಕ 14.7.2003 ರಂದು ಮಧ್ಯಾಹ್ನ 1.00 ಗಂಟೆ ಸುಮಾರಿಗೆ ಬ್ಯಾಡಗಿ ತಹಶೀಲ್ದಾರ್‌ರವರ ಕಚೇರಿಯ ಮುಂದೆ ಬ್ಯಾಡಗಿ ತಾಲ್ಲೂಕು ಅಖಿಲ ಭಾರತ ಪ್ರಗತಿಪರ ಜನತಾದಳ ಸದಸ್ಯರು ತಹಶೀಲ್ದಾರ್ ಕಚೇರಿಯ ಮುಂದೆ ಸೇರಿ ತಮ್ಮ ಬೇಡಿಕೆಗಳಾದ ರೈತರಿಗೆ ಬೆಳೆ ವಿಮೆ, ದನಗಳಿಗೆ ಮೇವಿನ ವ್ಯವಸ್ಥೆ, ಬರಗಾಲ ಕಾಮಗಾರಿ ಪ್ರಾರಂಭ. ದೀರ್ಘಾವಧಿ ಸಾಲದ ಅನುಕೂಲತೆ ಹಾಗೂ ಇನ್ನಿತರ ಬೇಡಿಕೆಗಳನ್ನು ಮುಂದಿಟ್ಟುಕೊಂಡು ತಮ್ಮ ಜೊತೆಗೆ ತಂದು ಎತ್ತು, ಕುರಿ, ಎತ್ತಿನ ಬಂಡಿ ಸಮೇತ ಬ್ಯಾಡಗಿ ತಹಶೀಲ್ದಾರ್ ಕಾರ್ಯಾಲಯಕ್ಕೆ ನುಗ್ಗಿ ಆರೋಪಿತರಾದ ನೆಹರು ಚನ್ನಬಸಪ್ಪ ಓಲೇಕಾರ (ಹಾಲಿ ಶಾಸಕರು) ಮತ್ತು ಇತರೆ ನಾಲ್ಕು ಜನರ ಪ್ರಚೋದನೆ ಮೇರೆಗೆ ಕಚೇರಿ ಕೆಲಸಕ್ಕೆ ಅಡೆತಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಕಿಟಕಿ ಗಾಜುಗಳನ್ನು ಕಲ್ಲು ಮತ್ತು ಚಪ್ಪಲಿಯಿಂದ ಒಡೆದು ಹಾಳು ಮಾಡಿ ತಹಶೀಲ್ದಾರ್ ಮತ್ತು ಸಿಬ್ಬಂದಿಯವರಿಗೆ ಗಾಯಪಡಿಸಿ, ಜೀವ ಭಯ ಹಾಕಿ ಸುಮಾರು ರೂ. 15000–00 ಗಳಷ್ಟು ನಷ್ಟ ಉಂಟು ಮಾಡಿರುತ್ತಾರೆ.

ಈ ಸಂಬಂಧ ಬ್ಯಾಡಗಿ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:89/ 2003 ಕಲಂ 143, 147, 148,341,427, 109, 353, 324, 504, 506 ಜೊತೆಗೆ 149 ಐಪಿಸಿ ಪ್ರಕಾರ ಬಸವರಾಜ ಶಿವಪ್ಪ, ನೆಹರು ಚನ್ನಬಸಪ್ಪ ಓಲೇಕಾರ ಹಾಗೂ ಇತರೆ 17 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಪ್ರಕರಣದಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು ಸಿ.ಸಿ.ಸಂಖ್ಯೆ ; 541/2003ರಲ್ಲಿ ದಿನಾಂಕ 22.7.2003ರಲ್ಲಿ ನಾಲ್ಕು ಮಂದಿಯನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಈ ಪ್ರಕರಣದಲ್ಲಿಯೂ ನೆಹರು ಚನ್ನಬಸಪ್ಪ ಓಲೇಕಾರ ಹಾಗೂ ಇತರರು ಪರಾರಿ ಇದ್ದು ಅವರನ್ನು ನ್ಯಾಯಾಲಯದ ಮುಂದೆ ದಿನಾಂಕ 13.8.2004ರಂದು ಹಾಜರು ಪಡಿಸಲು ಎನ್.ಬಿ.ಡಬ್ಲ್ಯೂ. ಜಾರಿ ಮಾಡಲಾಗಿದೆ.

ದಿನಾಂಕ 20.9.2003ರಂದು 1245 ಗಂಟೆಯಿಂದ 1530 ಗಂಟೆಯವರೆಗೆ ಹಿರೇಕೆರೂರು ಪಟ್ಟಣದಲ್ಲಿ ಪ್ರವಾಸಿ ಮಂದಿರದ ಎದುರುಗಡೆಯ ರಸ್ತೆಯ ಪೊಲೀಸ್ ಮೈದಾನದಲ್ಲಿ ನಡೆಯುತ್ತಿದ್ದ ಕರ್ನಾಟಕ ಸರ್ಕಾರದ ವಿವಿಧ ರಚನಾತ್ಮಕ ಕಾರ್ಯಕ್ರಮಗಳ ಸಭೆಯನ್ನು ನಡೆಯದಂತೆ ತಡೆಯುವ ದುರುದ್ದೇಶದಿಂದ ಶ್ರೀ ಬಿ.ಸಿ. ಪಾಟೀಲ್ (ಹಾಲಿ ಶಾಸಕರು) ಮತ್ತು ಇನ್ನಿತರ 2000 ಜನರು ಪ್ರವಾಸಿ ಮಂದಿರದ ಮುಂದುಗಡೆ ಹೋಗುವಾಗ ಪೊಲೀಸರು ತಡೆದಿದ್ದು. ಆಗ ಶ್ರೀ

ಬಿ.ಸಿ. ಪಾಟೀಲ್ ರವರು ಮಾಡಿದ ಪ್ರಚೋದನಕಾರಿ ಭಾಷಣದಿಂದ ದೊಂಬಿ, ಗಲಾಟೆ ನಡೆದು ಕರ್ತವ್ಯನಿರತ ಪೊಲೀಸ್ ಆಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಮೇಲೆ ಕಲ್ಲು ತೂರಾಟ ಮಾಡಿ ತೀವ್ರ ಸ್ವರೂಪದ ಗಾಯ ಪಡಿಸಿದ್ದಲ್ಲದೇ ಮಹಿಳಾ ಪಿ.ಸಿ. ಮಲ್ಲಮ್ಮ ಇವರ ತಲೆಗೆ ಗಾಯ ಪಡಿಸಿ 4 ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಗೆ ಜಖಂ ಮಾಡಿ ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಹಾನಿ ಮಾಡಿ, ಸಿ.ಪಿ.ಐ. ಹಿರಿಕೇರೂರು ರವರ ಸರ್ಕಾರಿ ಜೀಪಿಗೆ ಬೆಂಕಿ ಹಚ್ಚಿ ಒಟ್ಟು ರೂ. 1,30,000–00ರಷ್ಟು ಹಾನಿಯಾಗಿರುತ್ತದೆ. ದೊಂಬಿ ನಿರತ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗಿಸಿರುತ್ತಾರೆ. ಈ ಸಂಬಂಧ ಹಿರೇಕೆರೂರು ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 100/2003 ಕಲಂ 143, 147, 148, 324, 332, 333, 504, 307 ಜೊತೆಗೆ 149 ಐಪಿಸಿ ಪ್ರಕಾರ ಶ್ರೀ ಬಿ.ಸಿ. ಪಾಟೀಲ್ ಹಾಗೂ ಇತರೆ 211 ಮಂದಿಯ ವಿರುದ್ಧ ಪ್ರಕರಣ ದಾಖಲಾಗಿದ್ದು, 193 ಜನರನ್ನು ದಸ್ತಗಿರ್ ಮಾಡಿದ್ದು, ಶ್ರೀ ನೆಹರು ಓಲೇಕಾರ್ ಹಾಗೂ ಇನ್ನಿತರರು ಪರಾರಿಯಾಗಿರುತ್ತಾರೆ. ಸದರಿ ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು ನ್ಯಾಯಾಲಯದಲ್ಲಿ ಸಿ.ಸಿ.ನಂ. 101/2004 ರಲ್ಲಿ ವಿಚಾರಣೆ ಬಾಕಿ ಇರುತ್ತದೆ. ನ್ಯಾಯಾಲಯದಲ್ಲಿ 210 ಅಪರಾಧಿಗಳ ಹಾಜರಾತಿಗಾಗಿ ದಿನಾಂಕ 7.8.2004 ರಂದು ನಿಗದಿಪಡಿಸಲಾಗಿದೆ. ನ್ಯಾಯಾಲಯಕ್ಕೆ ಇದುವರೆವಿಗೂ ಗೈರು ಹಾಜರಾಗಿದ್ದ ಆರೋಪಿ ಶ್ರೀ ನೆಹರು ಚನ್ನಬಸಪ್ಪ ಓಲೆಕಾರ(ಹಾಲಿ ಎಂ.ಎಲ್.ಎ. ಬ್ಯಾಡಗಿ) ಹಾಗೂ ಇನ್ನೊಬ್ಬರ ಹಾಜರಾತಿಗಾಗಿ 19.8.2004ರಂದು ದಸ್ತಗಿರಿ ವಾರೆಂಟ್ ಹೊರಡಿಸಲಾಗಿದೆ.

**ಅಧ್ಯಕ್ಷರು :** ಮಾನ್ಯ ಸದಸ್ಯರಲ್ಲಿ ಮನವಿ ಏನು ಅಂದರೆ ಶೂನ್ಯವೇಳೆಯಲ್ಲಿ ತಾವು ಸರ್ಕಾರದ ಗಮನವನ್ನು ಸೆಳೆಯುತ್ತೀರಿ. ಅವರು ಉತ್ತರ ಕೊಡುತ್ತಾರೆ. ಮಾನ್ಯ ಯಡಿಯೂರಪ್ಪನವರೇ, ಬಹಳಷ್ಟು ಜನ ನೋಟೀಸ್ ಕೊಟ್ಟಿದ್ದಾರೆ. ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ. ಯಾವುದೇ ಒಂದು ವಿಚಾರವನ್ನು ಎತ್ತಿದಾಗ ಹತ್ತಾರು ಜನ ಅದರಲ್ಲಿ ಭಾಗವಹಿಸಿ ಚರ್ಚೆ ಆಗುವುದಾದರೆ ಅಷ್ಟೆಕ್ಕೇ ಸೀಮಿತ ಆಗಬೇಕಾಗುತ್ತದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಒಂದು ನಿಮಿಷ ಸಾರ್ ನನಗೆ ಅವಕಾಶ ಕೊಡಿ. ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ ಸಾರ್.

**ಅಧ್ಯಕ್ಷರು :** ನಾನೇನು ಮನವಿ ಮಾಡುತ್ತೇನೆ, ಅದನ್ನು ಅರ್ಥ ಮಾಡಿಕೊಳ್ಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ನಾನು ಕೇಳಿಸಿಕೊಂಡೆ. 2ನೇ ತಾರೀಖಿನಿಂದ ಆರನೇ ತಾರೀಖಿನವರೆಗೆ ನಿಮ್ಮ ಕೊಠಡಿಗೆ ಬಂದು ಸರ್ಕಾರದ ಜೊತೆ ಮಾತನಾಡಿ ಅವಧಿ ವಿಸ್ತರಣೆ ಮಾಡಿದ ಉದ್ದೇಶನೇ ಬಹಳ ಪ್ರಮುಖವಾದ ವಿಷಯಗಳು ಇಲ್ಲಿ ಚರ್ಚೆ ಆಗಬೇಕಾಗಿದೆ. ನೀರಾವರಿ ಬಗ್ಗೆ ಚರ್ಚೆ ಆಗಬೇಕಾಗಿದೆ. ಕೈಗಾರಿಕೆಗಳ ಬಗ್ಗೆ ಅದರ ಅಸ್ತಿತ್ವದ ಬಗ್ಗೆ ಚರ್ಚೆ ಆಗಬೇಕಾಗಿದೆ. ಅಲ್ಲಿ ಕಬ್ಬಿಣದ ಅದಿರು ಕಳ್ಳ ಸಾಗಾಣಿಕೆ ಆಗುವುದರ ಬಗ್ಗೆ ಚರ್ಚೆ ಆಗಬೇಕಾಗಿದೆ. ಅದರ